# ವರ್ತಮಾನ ಅರ್ಥಮಾಡಿಕೊಂಡು, ಭವಿಷ್ಯ ರೂಪಿಸಿಕೊಳ್ಳಲು ಐತಿಹಾಸಿಕ ದಾಖಲೆ ಅಗತ್ಯ: ಡಾ. ಉದಯ್ ಕುಮಾರ್ ಎಂ.ಎ

ವರ್ತಮಾನ ಅರ್ಥಮಾಡಿಕೊಂಡು, ಭವಿಷ್ಯ ರೂಪಿಸಲು ಐತಿಹಾಸಿಕ ದಾಖಲೆಗಳು ಅಗತ್ಯ, ಎಂದು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಡಾ. ಉದಯ್ ಕುಮಾರ್ ಎಂ.ಎ ಹೇಳಿದರು.

ಕಾಲೇಜಿನ ಇತಿಹಾಸ ಮತ್ತು ಪುರಾತತ್ವ ವಿಭಾಗ ಶಿವರಾಮ ಕಾರಂತ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಹೊಸ ಬ್ಯಾಚ್‌ನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, "ಸ್ನಾತಕೋತ್ತರ ವಿಭಾಗ ಪದವಿಯ ವಿಸ್ತರಣೆಯಾಗಬಾರದು. ಇಲ್ಲಿ ವಿದ್ಯಾರ್ಥಿಗಳು 150 ವರ್ಷಗಳ ಭವ್ಯ ಇತಿಹಾಸ ಹೊಂದಿರುವ ನಮ್ಮ ಕಾಲೇಜಿನ ಬಗ್ಗೆಯೇ ತಿಳಿದುಕೊಳ್ಳಬೇಕಾಗಿರುವುದು ಸಾಕಷ್ಟಿದೆ. ಆಗಿನ ಮದ್ರಾಸ್ ಪ್ರಾಂತ್ಯದಲ್ಲಿ ಕಾಲೇಜಿನ ಬಗ್ಗೆ ಮಹತ್ವದ ದಾಖಲೆಗಳಿವೆ," ಎಂದರು.

ಕಾಯಕ್ರಮ ಉದ್ಘಾಟಿಸಿದ ವಾಣಿಜ್ಯ ವಿಭಾಗದ ಸಹ ಪ್ರಾಧ್ಯಾಪಿಕೆ ಡಾ. ಅನುಸೂಯಾ ರೈ ಕೋರ್ಸ್‌ಗೆ ಸೇರಿರುವ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವ ವಿಭಾಗದ ಸಂಚಾಲಕ ಡಾ. ಗಣಪತಿ ಗೌಡ, ಪುರಾತತ್ವ ವಿದ್ಯಾರ್ಥಿಗಳು ತಮ್ಮ ಹೊರಾಂಗಣ ಪ್ರಯೋಗಾಲಯವನ್ನು ಸೂಕ್ತವಾಗಿ ಬಳಸಿಕೊಳ್ಳುವುದು ಸವಾಲಿನ ಕೆಲಸ, ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎ ಹರೀಶ, ಹಿರಿಯ ವಿದ್ಯಾರ್ಥಿಗಳಿಂದ ಕಿರಿಯರಿಗೆ ಸಾಕಷ್ಟು ಮಾರ್ಗದರ್ಶನ ಸಿಗಲಿ, ಎಂದು ಹಾರೈಸಿದರು.

ಇದೇ ಸಂಧರ್ಭದಲ್ಲಿ ಕೆಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ಮಹೇಶ್ ಅವರನ್ನು ಅಭಿನಂದಿಸಲಾಯಿತು. ವಿಭಾಗದ ಹೊಸ ಸದಸ್ಯರಿಗೆ ಹೂ ನೀಡುವ ಮೂಲಕ ಆತ್ಮೀಯವಾಗಿ ಭರಮಾಡಿಕೊಳ್ಳಲಾಯಿತು. ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಕುಮಾರಸ್ವಾಮಿ, ಡಾ. ಮೀನಾಕ್ಷಿ ಎಂ.ಎಂ, ಉಪನ್ಯಾಸಕಾರದ ರಂಜಿತ್ ಕೆ.ಎಸ್, ರತನ್ ಸಾಲಿಯಾನ್ ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಕಾವ್ಯಾ ಅತಿಥಿಗಳನ್ನು ಸ್ವಾಗತಿಸಿದರೆ, ತುಳಸಿ ಧನ್ಯವಾದ ಸಮರ್ಪಿಸಿದರು. ಸ್ಫೂರ್ತಿ ಕಾರ್ಯಕ್ರಮ ನಿರೂಪಿಸಿದರು.

